ಕಣ್ಣಮರೆಯಲ್ಲಿ ಏನು ಮಾಡಿದರೂ ನಡೆಯುತ್ತದೆ. ಅದರ ಕಣ್ಣಿಗೆ, ಬಾಯಿಗೆ ಬೀಳದಂತೆ ಬದುಕು ನಡೆಸಿದರಷ್ಟೇ ಘನತೆ, ಗೌರವ, ಹೊಕ್ಕುಬಳಕೆ.

* * *

ಭಾರ್ಗವ ಎಂಜಿನಿಯರೋ, ಡಾಕ್ಟರೋ ಆಗಿ ತನ್ನ ಹೆಮ್ಮೆಯನ್ನು ಮೆರೆಸಬೇಕೆಂದು ಚಿದಾನಂದನಿಗೆ ತೀವ್ರಾಪೇಕ್ಷೆ ಇತ್ತು. ಅದಕ್ಕಾಗಿ ಧಾರಾಳವಾಗಿ ಖರ್ಚು ಮಾಡುವಷ್ಟು ಸಂಪಾದನೆಯೂ ಇತ್ತು. ಆದರೆ ಭಾರ್ಗವ ಅಪ್ಪನ ಆಸೆಯನ್ನು ಪೂರೈಸುವ ಮಗನಾಗಲಿಲ್ಲ. ಹಾಗೂ ಹೀಗೂ ಏದುಸಿರು ಬಿಡುತ್ತಾ ಬಿಕಾಂ ಪೂರೈಸಿದ. 'ಎಂಬಿಎ ಮಾಡು. ಬರೀ ಡಿಗ್ರಿಗೆ ಏನು ಬೆಲೆ?' ಚಿದಾನಂದನ ಒತ್ತಾಯ ಫಲ ಕೊಡಲಿಲ್ಲ.

'ಯಾವುದಾದ್ರೂ ಕೆಲಸಕ್ಕೆ ಸೇರ್ಕೋತೀನಿ' ಅಂದ ಹುಡುಗ. ಬ್ಯಾಂಕ್ ಪರೀಕ್ಷೆ ಪಾಸು ಮಾಡಿಕೊಂಡು ಬ್ಯಾಂಕಿಗೆ ಸೇರಿಕೊಂಡರೆ ಅದರಲ್ಲೇ ಮುಂದೆ ಬರಬಹುದು ಎನ್ನುವ ಪ್ರಯತ್ನ ನಿಷ್ಫಲವಾಯ್ತು. ಚಿದಾನಂದ ತಲೆಕೆಡಿಸಿಕೊಂಡ. ಯಾಕೆ ತನ್ನ ಬದುಕಲ್ಲಿ ಹೀಗಾಗುತ್ತಿದೆ? ತಾನು ಅಂದುಕೊಂಡಿದ್ದು ಯಾವುದೂ ನಡೆಯುವುದಿಲ್ಲ. ಇದ್ದಿದ್ದರಲ್ಲಿ ಸುಖ ಕಂಡುಕೊಂಡೆ ಎನ್ನುವಷ್ಟರಲ್ಲಿ ಮತ್ತ್ಯಾವುದೋ ಚಿಂತೆ ಬೆನ್ನು ಹತ್ತುತ್ತದೆ ಎನ್ನುವ ಕೊರಗು ಹಚ್ಚಿಕೊಂಡ. ಮಗ ಕೈ ತಪ್ಪಿ ಹೋಗುತ್ತಿದ್ದಾನೆ ಎನ್ನುವ ಸಂದೇಹ ಕೂಡ ಜೊತೆ ಸೇರಿಕೊಂಡಿತು. ಬೆಳಿಗ್ಗೆ ತಿಂಡಿ ತಿನ್ನುತ್ತಿದ್ದಂತೆ ಎಲ್ಲಿಗೋ ಹೋಗುತ್ತಾನೆ. ಎಷ್ಟು ಹೊತ್ತಿಗೋ ವಾಪಸು ಬರುತ್ತಾನೆ. ಮನೆಯ ಆಕರ್ಷಣೆಗಿಂತ ಗೆಳೆಯರ, ಹೊರ ಜಗತ್ತಿನ ಆಕರ್ಷಣೆ ಹೆಚ್ಚಾಗಿದೆ. ಆಗದೆ ಮತ್ತೇನು? ಹೇಳಕೇಳುವವರಿಲ್ಲದ ಮನೆಯಲ್ಲಿ ಯಾವ ಸೆಳೆತ ಇರುತ್ತದೆ? ಹೀಗೇ ಇದ್ದರೆ ಮಗ ಪೂರಾ ಕೈ ತಪ್ಪಿ ಹೋಗುತ್ತಾನೆ ಎನ್ನುವ ಭೀತಿಯಿಂದ ಚಿದಾನಂದ ಅವನಿಗೊಂದು ನೆಲೆ ಕಲ್ಪಿಸುವ ಹೊಣೆಯನ್ನು ತಾನೇ ವಹಿಸಿಕೊಂಡ. ಬ್ಯಾಂಕಿನಲ್ಲಿ ಉನ್ನತ ಹುದ್ದೆಯಲ್ಲಿದ್ದ ಅವನಿಗೆ ಕೈಗಾರಿಕೋದ್ಯಮಿಗಳನೇಕರ ಪರಿಚಯ ಇತ್ತು. ಸಾಲ ಕೊಡುವುದು, ವಾಪಸು ಪಡೆಯುವುದು, ಠೇವಣಿಗೆ ಒತ್ತಾಯ ಹಾಕುವುದು – ಹೀಗೆ ಹಲವು ವಿಧಗಳಲ್ಲಿ ಬೆಳೆದ ಪರಿಚಯ. ಕೆಲವರೊಡನೆ ಕೇವಲ ಪರಿಚಯಕ್ಕಿಂತ ಹೆಚ್ಚಿನ ನಿಕಟತೆಯೂ ಇತ್ತು. ಯಾರನ್ನೂ ಸ್ವಾರ್ಥಕ್ಕೆ ಬಳಸಿಕೊಳ್ಳಬಾರದು, ಯಾರ ಹಂಗಿಗೂ ಬೀಳಬಾರದು ಎನ್ನುವ ಅವನ ನಿಷ್ಠೆ ಮಗನ ವಿಷಯ ಮುನ್ನೆಲೆಗೆ ಬಂದಾಗ ತನ್ನಷ್ಟಕ್ಕೆ ಪಟ್ಟು ಸಡಿಲಿಸಿತು. ಪರಿಣಾಮ ಕಬ್ಬಿಣದ ಬಿಡಿಭಾಗಗಳನ್ನು ತಯಾರಿಸಿ ಮಾರಾಟ ಮಾಡುವ ಹೆಸರಾಂತ ಫ್ಯಾಕ್ಟರಿಯೊಂದರಲ್ಲಿ ಭಾರ್ಗವ ಲೆಕ್ಕಪತ್ರ ವಿಭಾಗದ ಮುಖ್ಯಸ್ಥನಾಗಿ ಸೇರ್ಪಡೆಗೊಂಡ. ತೀರಾ ಹೆಚ್ಚಲ್ಲದ, ಕಡಿಮೆ ಅನ್ನುವಂತೆಯೂ ಇಲ್ಲದ ಸಂಬಳ. ಅಚ್ಚುಕಟ್ಟಾಗಿ ಸಂಸಾರ ನಡೆಸಿದರೆ ಅರೆಯಾಗದಷ್ಟು ಅನುಕೂಲ.

'ಸದ್ಯಕ್ಕೆ ಸೇರ್ಕೋ. ಮುಂದೆ ಒಳ್ಳೆಯ ಕೆಲಸ ಸಿಕ್ಕಿದರೆ ನೋಡೋಣ. ಅನುಭವಕ್ಕೆ ಬೆಲೆ ಇದ್ದೇ ಇರುತ್ತೆ' ಎನ್ನುವ ಅಪ್ಪನ ಮಾತು ಮಗನಿಗೂ ಪಥ್ಯವಾಗಿ ಭಾರ್ಗವ ನೌಕರಸ್ಥನಾದ ಅನ್ನುವಲ್ಲಿಗೆ ಚಿದಾನಂದನ ಒಂದು ತಲೆನೋವು ಪರಿಹಾರವಾಯ್ತು. ಮಗ ಉಡಾಳನಾಗಿದ್ದಾನೆ ಎನ್ನುವ ಅವನ ನಂಬಿಕೆ ಶುದ್ಧಾಂಗ ಸುಳ್ಳು ಅನ್ನುವಂತೆ ಭಾರ್ಗವ ತನ್ನ ಕೆಲಸಕ್ಕೆ ಅಂಟಿಕೊಂಡ. ತಿಂಗಳ ಮೊದಲ ದಿನ ಸಿಗುತ್ತಿದ್ದ ಸಂಬಳ ಅವನಿಗೆ ಆಕರ್ಷಕವೆನಿಸಿತ್ತು. ಅಲ್ಲದೆ ಅಪ್ಪನೆದುರು ಕೈಚಾಚಬೇಕಾದ ಪ್ರಮೇಯ ಇಲ್ಲದೆ ಮನ ಬಂದಂತೆ ಖರ್ಚು ಮಾಡಲು ಸಾಕಾಗುವಷ್ಟಿತ್ತು. ಪ್ರಾಯದ ಪೊಗರು. ಸ್ವಂತ ದುಡಿಮೆಯ ಹಮ್ಮು. ಮಗ ಕೂಡ ಮಗಳ ಹಾಗೆ ಪ್ರೀತಿ, ಪ್ರೇಮ ಎಂದು ಅಡ್ಡದಾರಿ ಹಿಡಿದರೆ ತಾನು ತಡೆಯೊಡ್ಡುವುದರಿಂದ ಪ್ರಯೋಜನವಾಗಲಿಕ್ಕಿಲ್ಲ ಎಂದು ಚಿದಾನಂದನ ಚಿಂತೆ.

'ಅಕ್ಕ ಮಾಡಿದರೆ ಸರಿ, ನಾನು ಮಾಡಿದರೆ ತಪ್ಪಾ?' ಎನ್ನುವ ಅಹವಾಲು ಬಂದೇ ಬರುತ್ತದೆ. ತನ್ನ ಮನಸ್ಸಿಗೆ ಒಪ್ಪಿತವಾಗುವಂತಿದ್ದರೆ ಸರಿ, ಹಾಗಿಲ್ಲದಿದ್ದರೆ, ವಿರೋಧದ ಮಾತಾಡಿದರೆ, ಮಗನನ್ನೂ ಕಳೆದುಕೊಳ್ಳಬೇಕಾದ ಪ್ರಸಂಗ ಬರಬಹುದು. ಹೀಗೆನಿಸುವಾಗ ಎಲ್ಲಿದ್ದಾಳೆಂಬ ಸುಳಿವೂ ಇಲ್ಲದ ಮಗಳ ನೆನಪು ಕಾಡಲು ಶುರುವಾಗಿ ಚಿದಾನಂದ ವಿಷಣ್ಣನಾಗುತ್ತಿದ್ದ. ಹೋದವಳು ಶಾಶ್ವತವಾಗಿ ಹೋಗಿಯೇ ಬಿಡುವುದೇ? ಇಷ್ಟು ವರ್ಷ ಸಾಕಿ ಸಲಹಿದ ಅಪ್ಪನ ನೆನಪು ಮರೆತೇ ಹೋಯಿತೇ? ತಮ್ಮನನ್ನು ಹೊಟ್ಟೆಯಲ್ಲಿ ಹುಟ್ಟಿದ ಮಗ ಎನ್ನುವಂತೆ ಜೋಪಾನ ಮಾಡುತ್ತಿದ್ದ ಮಗಳ ಕಾಳಜಿ ಒಂದು ಕಾಲದಲ್ಲಿ ಚಿದಾನಂದನಿಗೆ ಅತ್ಯಂತ ಆತ್ಮತೃಪ್ತಿ ಕೊಡುತ್ತಿದ್ದ ಅಭಿಮಾನದ ವಿಷಯವಾಗಿತ್ತು. ಆ ತಮ್ಮ ಕೂಡ ನೆನಪಿಗೆ ಬರದಷ್ಟು ಮಗಳು ಬದಲಾಗಿದ್ದು ಹೇಗೆ? ಮತ್ತದೇ ಅನುಮಾನ, ಬದುಕಿದ್ದಾಳೋ ಅಥವಾ ಕೈಯಾರೆ ಜೀವ ತೆಗೆದುಕೊಂಡು... ಉಗುಳು ನುಂಗಿಕೊಳ್ಳುತ್ತಿದ್ದ ಚಿದಾನಂದ.

ದೇವರೇ, ಅವಳು ಯಾರ ಜೊತೆಗಾದರೂ ಹೋಗಿರಲಿ, ಜೀವ ಸಹಿತ ಸುಖವಾಗಿರಲಿ ಎಂದು ಅಂತರ್ಯದಲ್ಲಿ ಹಾರೈಸುವಷ್ಟು ಮೃದುವಾಗತೊಡಗಿತ್ತು ಅಪ್ಪನಾದವನ ಮನಸ್ಸು. ಭಾರ್ಗವ ಅಕ್ಕನಂತೆ ಪ್ರೀತಿ, ಪ್ರೇಮ ಎನ್ನುವ ಗುಂಗಿಗೆ ಬೀಳದಂತೆ ಆದಷ್ಟು ಬೇಗ ಅವನ ಮದುವೆ ಮಾಡಿಬಿಡಬೇಕು ಎಂದು ನಿರ್ಧರಿಸಿಕೊಂಡಿದ್ದ ಚಿದಾನಂದ. ಮಗನ ಓದಿಗೆ, ನೌಕರಿಗೆ ದೊಡ್ಡಮಟ್ಟದ ಸಂಬಂಧ ಅವನು ನಿರೀಕ್ಷಿಸುವಂತಿಲ್ಲ. ತಾನು ದುಡಿದಿದ್ದು ಎಷ್ಟೇ ಇರಲಿ, ಹೆಣ್ಣು ಕೊಡುವವರು ನೋಡುವುದು ಹುಡುಗನ ನೌಕರಿ, ವರಮಾನ. ಅಲ್ಲದೆ ಅವನ ಅಕ್ಕನಿಗೆ ಓಡಿಹೋದವಳು ಎನ್ನುವ ಪಟ್ಟ ಬೇರೆ ಅಂಟಿಕೊಂಡಿದೆ. ಮುಚ್ಚಿಟ್ಟು ಮದುವೆ ಮಾಡುವುದು ಚಿದಾನಂದನ ಜಾಯಮಾನಕ್ಕೆ ಒಗ್ಗದ ವಿಷಯ. ಅಲ್ಲದೆ ವಿಷಯ ಮುಚ್ಚಿಡುವಂಥದ್ದೂ ಅಲ್ಲ. ಚಿದಾನಂದ ಹೀಗೆ ಪರಿತಪಿಸುತ್ತಿದ್ದಾಗ ಮನೆಗೆಲಸದ ಸರೋಜ ಒಂದು ಸಂಬಂಧದ ಪ್ರಸ್ತಾಪ ತಂದಳು ಅನ್ನುವುದು ಆಶ್ಚರ್ಯ, ಆದರೂ ನಿಜ. ದೇವರು ಯಾರ ರೂಪದಲ್ಲಿ ಯಾವಾಗ ಸಹಾಯಕ್ಕೆ ಬರುತ್ತಾನೋ ಗೊತ್ತಿಲ್ಲ ಅನಿಸಿಬಿಟ್ಟಿತ್ತು ಚಿದಾನಂದನಿಗೆ.

ಇವರ ಮನೆ ಹೊರತುಪಡಿಸಿ ಮತ್ತೂ ಎರಡು ಮನೆಗಳಿಗೆ ಸುತ್ತು ಕೆಲಸಕ್ಕೆ ಹೋಗುತ್ತಿದ್ದವಳು ಸರೋಜ. ಇಂಥ ಒಂದು ಮನೆಯಲ್ಲಿ ಮದುವೆಗೆ ಬೆಳೆದು ನಿಂತ ಒಬ್ಬ ಹುಡುಗಿ ಇದ್ದಳು. ಅವಳಿಗೆ ಗಂಡು ಹುಡುಕುತ್ತಿದ್ದ ವಿಷಯ ಸರೋಜನಿಗೆ ಗೊತ್ತಿತ್ತು. ಮಧ್ಯಮ ವರ್ಗದ ಕುಟುಂಬ. 'ನೋಡಿ, ಹೀಗೊಬ್ಬ ಹುಡುಗ ಇದ್ದಾನೆ. ಸಣ್ಣವನಿದ್ದಾಗಿಂದ ನೋಡಿದವನು' ಶಿಫಾರಸು ಮಾಡಿದ್ದಳು ಸರೋಜ. ಕಟ್ಟುಕತೆಯಂತೆ ಕಂಡರೂ ಮನೆಕೆಲಸದ ಹೆಣ್ಣು ಸರೋಜ ಸೂಚಿಸಿದ ಈ ಸಂಬಂಧ ಕೂಡಿ ಬಂದಿತ್ತು. ಕೆಲವೊಮ್ಮೆ ಜೀವನ ಅನ್ನುವುದು ಕಟ್ಟುಕತೆಗಿಂತಲೂ ರೋಚಕವಾಗಿರುತ್ತದೆ ಎನ್ನುವುದಕ್ಕೆ ಉದಾಹರಣೆಯಾಗಿತ್ತು. ಭಾರ್ಗವನ ವಿದ್ಯೆ, ನೌಕರಿ ಯಾವುದೇ ಇರಲಿ, ಅವನ ಅಪ್ಪ ಬಲವಾಗಿದ್ದಾರೆ. ಬೆಂಗಳೂರಿನಲ್ಲಿ ಸ್ವಂತ ಮನೆ ಅಂದರೆ ತಳ್ಳಿ ಹಾಕುವಂತಹ ಸಂಬಂಧ ಅಲ್ಲ. ಮನೆಯಿದೆ, ಕಾರಿದೆ, ಅಪ್ಪನ ಬ್ಯಾಂಕ್ ಬ್ಯಾಲೆನ್ಸ್ ಇದ್ದೇ ಇರುತ್ತದೆ. ಅತ್ತೆಯ ಚಿನ್ನಾಭರಣಗಳೇನಿದ್ದರೂ ಸೊಸೆಯಾದವಳಿಗೆ ದಕ್ಕುತ್ತದೆ. ಚಿದಾನಂದನಿಗೆ ಇನ್ನೂ ಎರಡು ವರ್ಷಗಳ ಸರ್ವೀಸು ಬಾಕಿ ಉಳಿದುಕೊಂಡಿದೆ. ಅಂದರೆ ಹಣದ ಗಂಟು ಮತ್ತಷ್ಟು ದೊಡ್ಡದಾಗುತ್ತದೆ. ನಿವೃತ್ತಿಯಾದ ಮೇಲೂ ಕೆಲಸ ಮಾಡುವ ಮನಸ್ಸಿದ್ದರೆ ಅವಕಾಶ ಇದ್ದೇ ಇರುತ್ತದೆ. ಸಂಬಂಧ ಬೆಳೆಸುವವರಿಗೆ ನಾನಾ ಪ್ರಲೋಭನೆಗಳು ಇದ್ದೇ ಇದ್ದುವು. ಕಿವಿ ಕಚ್ಚಿದ್ದಳು ಸರೋಜ.

'ಅಕ್ಕ ಲವ್ವು, ಗಿವ್ವು ಅಂದ್ಕೊಂಡು ಓಡಿ ಹೋಗಿ ಏಳೆಂಟು ವರ್ಷಾನೇ ಆಯ್ತು. ಎಲ್ಲಿದಾಳೆ ಅಂತ ಪತ್ತೆ ಇಲ್ಲ. ಸತ್ಯ ಹೇಳ್ಬೇಕು ಅಂದ್ರೆ ಬದುಕಿರೋದೇ ಅನುಮಾನ. ಯಜಮಾನ್ರಿಗೆ ಇದೊಂದು ದೊಡ್ಡ ಕೊರಗು'.

ಹುಡುಗಿ ಕೊಡುವವರಿಗೆ ಇದೊಂದು ದೊಡ್ಡ ವಿಷಯ ಅನಿಸಲಿಲ್ಲ. ಎಲ್ಲರ ಮನೆಯ ದೋಸೆಯೂ ತೂತು ಅಂದುಕೊಂಡರೇ ವಿನಾ ಈ ವಿಷಯ ಕೆದಕಲು ಹೋಗದೆ ಎಲ್ಲಾ ಸುಮುಖವಾಗಿ ನಡೆಯುತ್ತಿರುವುದು ಚಿದಾನಂದನಿಗೆ ಸಮಾಧಾನದ ವಿಷಯ. ಸುಮಾರಾಗಿದ್ದಳು ಹುಡುಗಿ. ತೀರಾ ತೆಗೆದು ಹಾಕುವಂತೆಯೂ ಇಲ್ಲ, ಸುನಂದೆ, ಸತ್ಯಭಾಮನ ಹಾಗೆ ಎದ್ದು ಕಾಣುವ ಚಂದವೂ ಇಲ್ಲ. 'ಏನಂತಿ?' ಮಗನನ್ನು ಕೇಳಿದ್ದ ಚಿದಾನಂದ. ಹುಡುಗಿಯರ ಸಂಗ ಬಯಸುವ ವಯಸ್ಸು. ಆದರೂ ತಕ್ಷಣ ಒಪ್ಪಿರಲಿಲ್ಲ ಭಾರ್ಗವ. 'ಇಷ್ಟು ಬೇಗ ಮದುವೇನಾ?' ಕುಂಯ್ಗುಟ್ಟಿದ್ದ.

'ಮನೇಲಿ ಹೆಣ್ಣು ದಿಕ್ಕಿಲ್ಲದೆ ಯಾವ ಕಾಲ ಆಯ್ತು? ನಿನ್ನ ಅಕ್ಕ ಸರಿಯಾಗಿದ್ದಿದ್ರೆ ನಮಗೆ ಈ ಪಾಡು ಬರ್ತಿತ್ತಾ? ಅದೊಂದು ಕಪ್ಪುಚುಕ್ಕೆ ಬೇರೆ ಅಂಟ್ಕೊಂಡಿದೆ'.

'ನಿಮ್ಮಿಷ್ಟ ಅಪ್ಪಾ...' ಅಂದಿದ್ದ ಭಾರ್ಗವ.

* * *

ಹೆಣ್ಣು ಹೆತ್ತವರು ಸರಳವಾಗಿ ಮದುವೆ ಮಾಡಿಕೊಟ್ಟರು. ಶೀಲಾ ಭಾರ್ಗವನ ಪತ್ನಿಯಾಗಿ ಮನೆ ತುಂಬಿದಳು. ಅದೆಷ್ಟೋ ವರ್ಷಗಳಿಂದ